ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	305 (351)
ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ	:	18.07.2019

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>1975ರಲ್ಲಿ ದಿ|| ಮಾಜಿ ಪ್ರಧಾನಿ ಇಂದಿರಾ ಗಾಂಧಿ ಯವರ 20 ಅಂಶಗಳ ಕಾರ್ಯ ಕ್ರಮದ ಅಡಿಯಲ್ಲಿ ಪ್ರಾರಂಭವಾದಂತಹ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಪುನಃಶ್ಚೇತನಗೊಳಿಸುವ ವಿಚಾರ ಯಾವ ಹಂತದಲ್ಲಿದೆ;</td><td>ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಪುನರ್ರಚನೆ ಹಾಗೂ ಪುನಃಶ್ಚೇತಗೊಳಿಸುವ ದಿಸೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ವಾಕೈ 22 ಜಕೈಯೋ 2016 ಬೆಂಗಳೂರು ದಿ:30-01-2018 ರಲ್ಲಿ ಒಟ್ಟು ರೂ. 50.00 ಕೋಟಿ ಮೊತ್ತದ ಯೋಜನೆಯನ್ನು ಘೋಷಿಸಲಾಗಿದೆ.
<table>
<tr><th>ಕ್ರ. ಸಂ.</th><th>ವಿವರಗಳು</th><th>ಮೊತ್ತ (ರೂ. ಕೋಟಿಗಳಲ್ಲಿ)</th></tr>
<tr><td>1.</td><td>ಹಣಕಾಸು ಅನುದಾನ</td><td></td></tr>
<tr><td>ಅ.</td><td>ನಿವೃತ್ತಿ ಹೊಂದಿದ ನೌಕರರಿಗೆ ಪಾವತಿಸುವ ಗ್ರಾಚ್ಯುಟಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು.</td><td>25.00</td></tr>
<tr><td>ಆ.</td><td>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯಾವಹಾರಿಕ ವೆಚ್ಚಗಳ ಅಗತ್ಯಗಳಗಾಗಿ ಹಣಕಾಸು ನೆರವು.</td><td>25.00</td></tr>
<tr><td></td><td>ಒಟ್ಟು</td><td>50.00</td></tr>
<tr><td>2.</td><td>ಲೆಕ್ಕ ಹೊಂದಾಣಿಕೆ</td><td></td></tr>
<tr><td>ಅ.</td><td>ಕರ್ನಾಟಕ ಸರ್ಕಾರದ ಸಾಲ/ಜವಾಬ್ದಾರಿಯನ್ನು ಷೇರನ್ನಾಗಿ ಪರಿವರ್ತಿಸುವುದು.</td><td>27.00</td></tr>
</table></td></tr>
<tr><td>ಆ)</td><td>ಈ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?</td><td>

ನಿಗಮದ ಪುನರ್ರಚನೆಗಾಗಿ ಈ ಮೇಲಿನಂತೆ ಒಟ್ಟು ರೂ. 50.00 ಕೋಟಿಗಳಲ್ಲಿ, ಸರ್ಕಾರದಿಂದ ರೂ. 43.00 ಕೋಟಿಯನ್ನು ಸಾಲದ ರೂಪದಲ್ಲಿ ನಿಗಮಕ್ಕೆ ನೀಡಲು ಹಾಗೂ ರೂ. 7.00 ಕೋಟಿಯನ್ನು ನಿಗಮದ ಆಂತರಿಕ ಮೂಲದಿಂದ ಭರಿಸಲು ಯೋಜಿಸಲಾಗಿರುತ್ತದೆ.
ನಿಗಮದಿಂದ ಸರ್ಕಾರಕ್ಕೆ ಪಾವತಿಸಲು ಬಾಕಿಯಿದ್ದ ರೂ. 27.00 ಕೋಟಿಯನ್ನು ಷೇರು ಬಂಡವಾಳವನ್ನಾಗಿ ಪರಿವರ್ತಿಸಲಾಗಿದೆ.
ಸರ್ಕಾರದಿಂದ ಈವರೆವಿಗೂ ನಿಗಮಕ್ಕೆ ರೂ. 33.75 ಕೋಟಿಯನ್ನು ಬಿಡುಗಡೆ ಮಾಡಲಾಗಿರುತ್ತದೆ.
ಸದರಿ ಅನುದಾನದಲ್ಲಿ ನೇಕಾರರಿಗೆ ನಿರಂತರ ಉದ್ಯೋಗ ಒದಗಿಸಲು ಕಚ್ಚಾ ನೂಲು ಖರೀದಿಸಿ ವಿತರಿಸಲು ಕ್ರಮವಹಿಸಲಾಗಿದೆ.
ನಿಗಮದ 299 ನಿವೃತ್ತ ನೌಕರರಿಗೆ ಗ್ರಾಚ್ಯೂಟಿ ಮತ್ತು ಇತರೆ ಆರ್ಥಿಕ ನಿವೃತ್ತಿ ಸೌಲಭ್ಯಗಳಿಗಾಗಿ ರೂ. 23.14 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.
</td></tr>
</table>

ಸಂ: ವಾಕೈ 70 JAKE 2019

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.